ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

# ಜೆಎಸ್‌ಎಸ್ ಹಿರಿಯರ ಮನೆ ಹಾಗೂ ಶಿವ ದೇವಾಲಯ:ಉದ್ಘಾಟನೆ

1ನೇ ಕ್ರಾಸ್, 'ಕೆ' ಬ್ಲಾಕ್, ವಾಸು ಬಡಾವಣೆ, ರಾಮಕೃಷ್ಣನಗರ, ಮೈಸೂರು

**9 ಸೆಪ್ಟೆಂಬರ್ 2026 * ಬುಧವಾರ * ಮಾಸ ಶಿವರಾತ್ರಿ * ಬೆಳಗ್ಗೆ 10.30**







ಸರ್ವರಿಗೂ ಹಾರ್ದಿಕ ಸ್ವಾಗತ



## ಹಿರಿಯರ ಮನೆ

ಹಿರಿಯ ನಾಗರಿಕರು ಇಂದು ಹಲವಾರು ಕಾರಣಗಳಿಂದಾಗಿ ಜೀವನದ ಸಂಧ್ಯಾಕಾಲದಲ್ಲಿ ನೆಮ್ಮದಿಯಿಂದಿರಲು ಸಾಧ್ಯವಾಗುತ್ತಿಲ್ಲ. ಮಕ್ಕಳು ಬಳಿ ಇಲ್ಲದಿರುವುದು, ಇದ್ದರೂ ಪ್ರತ್ಯೇಕವಾಗಿ ಇರುವುದು ಅಥವಾ ಉದ್ಯೋಗದ ಕಾರಣಗಳಿಂದಾಗಿ ದೇಶದ ಬೇರೆಬೇರೆ ಕಡೆಗಳಲ್ಲಿ ಹಾಗೂ ವಿದೇಶಗಳಲ್ಲಿ ನೆಲೆಸಿರುವುದು ಮುಂತಾದ ಅನಿವಾರ್ಯ ಪರಿಸ್ಥಿತಿಗಳಿಂದಾಗಿ ಮಕ್ಕಳೊಂದಿಗೆ ಇರಲು ಅವಕಾಶವಾಗುತ್ತಿಲ್ಲ. ಇದರಿಂದ ಹಿರಿಯ ನಾಗರಿಕರಿಗೆ ಸಾಮಾಜಿಕ, ಕೌಟುಂಬಿಕ ಹಾಗೂ ವೈಯಕ್ತಿಕ ಸಮಸ್ಯೆಗಳು ಎದುರಾಗುತ್ತವೆ. ಅದಕ್ಕೆ ಪರಿಹಾರವಾಗಿ ಮೈಸೂರಿನಲ್ಲಿ ಜೆಎಸ್‌ಎಸ್ ಹಿರಿಯರ ಮನೆಯನ್ನು ನೂತನವಾಗಿ ನಿರ್ಮಿಸಲಾಗಿದೆ.

ನೂತನ ಹಿರಿಯರ ಮನೆಯಲ್ಲಿ ಎರಡು ವಿಭಾಗಗಳಿರುತ್ತವೆ. ಒಂದು ಭಾಗದಲ್ಲಿ ಖರ್ಚುವೆಚ್ಚಗಳನ್ನು ನೀಡುವವರಿಗೆ ವಸತಿಗೆ ಅವಕಾಶ ಕೊಡಲಾಗುತ್ತದೆ. ಮತ್ತೊಂದು ಭಾಗದಲ್ಲಿ ಈಗ ಮೈಸೂರು ಅರವಿಂದ ನಗರದಲ್ಲಿ ಉಚಿತವಾಗಿ ನಡೆಯುತ್ತಿರುವ ಎರಡು ಘಟಕದವರಿಗೆ ಇಲ್ಲಿ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಲಾಗುತ್ತದೆ. ಮುಂದೆಯೂ ಈ ಎರಡು ವಿಭಾಗಗಳು ಪ್ರತ್ಯೇಕವಾಗಿ ಇರುತ್ತವೆ.

ಈಗಾಗಲೇ ಸುತ್ತೂರಿನಲ್ಲಿ ಎರಡು ಸುಸಜ್ಜಿತ ಹಿರಿಯರ ಮನೆಗಳಿವೆ. ಒಂದು ಉಚಿತವಾಗಿ ನಡೆಯುತ್ತಿದೆ. ಮತ್ತೊಂದರಲ್ಲಿ ಖರ್ಚುವೆಚ್ಚಗಳನ್ನು ನೀಡಿ ವ್ಯವಸ್ಥೆ ಪಡೆದುಕೊಳ್ಳಲು ಅವಕಾಶವಿದೆ.

**ಲಭ್ಯವಿರುವ ಸೌಲಭ್ಯಗಳು :** ಒಬ್ಬರು, ಇಬ್ಬರು ಹಾಗೂ ಮೂರ್‍ನಾಲ್ಕು ಜನರ ವಾಸ್ತವ್ಯಕ್ಕೆ ಪ್ರತ್ಯೇಕ ಕೊಠಡಿಗಳ ಸೌಲಭ್ಯ * ನಿರ್ಮಲ ವಾತಾವರಣ * ಆಕರ್ಷಕ ಒಳಾಂಗಣ * ಸುಸಜ್ಜಿತ ಪೀಠೋಪಕರಣಗಳುಳ್ಳ ವಿಶಾಲ ಕೊಠಡಿಗಳು * ಆರೋಗ್ಯಕ್ಕೆ ಪೂರಕವಾದ ಅಗತ್ಯಕ್ಕನುಗುಣವಾದ ಪೌಷ್ಟಿಕ ಸಸ್ಯಾಹಾರ * ಶುಶ್ರೂಷೆಗಾಗಿ ಆರೋಗ್ಯ ಸಿಬ್ಬಂದಿ * ಸದಾ ಬಿಸಿನೀರಿನ ಸೌಲಭ್ಯ * ಲಿಫ್ಟ್ * ಟಿವಿ * ಇಂಟರ್ನೆಟ್ * ಇಂಟರ್‌ಕಾಮ್ * ಒಳಾಂಗಣ ಆಟಗಳು * ಯೋಗ * ಧ್ಯಾನ * ವ್ಯಾಯಾಮ * ವಾಯುವಿಹಾರಕ್ಕೆ ವ್ಯವಸ್ಥೆ * ಗ್ರಂಥಾಲಯ ಹಾಗೂ ವಾಚನಾಲಯ * ಧಾರ್ಮಿಕ – ಸಾಂಸ್ಕೃತಿಕ ಆಚರಣೆಗಳು * ಚಿಂತನ–ಮಂಥನ, ಆಧ್ಯಾತ್ಮಿಕ ಅಧ್ಯಯನ–ಸಂವಾದ ಇತ್ಯಾದಿ * ಆಯುರ್ವೇದ, ಪ್ರಕೃತಿಚಿಕಿತ್ಸೆ ಹಾಗೂ ಆಧುನಿಕ ವೈದ್ಯಕೀಯ ಸೌಲಭ್ಯಗಳು.

## ಶಿವ ದೇವಾಲಯ

ಹಿರಿಯರ ಮನೆಗೆ ಹೊಂದಿಕೊಂಡಂತೆ ಅಲ್ಲಿನ ಸನಿವಾಸಿಗಳು ಹಾಗೂ ಬಡಾವಣೆಯ ಭಕ್ತಾದಿಗಳಿಗೆ ಅನುಕೂಲವಾಗುವಂತೆ ಶಿವ ದೇವಾಲಯವನ್ನು ನಿರ್ಮಿಸಲಾಗಿದೆ. ಶಿವಲಿಂಗ, ನಂದಿ, ಗಣೇಶ, ಸುಬ್ರಹ್ಮಣ್ಯ ಹಾಗೂ ನವಗ್ರಹಗಳ ಸಾನ್ನಿಧ್ಯವಿರುತ್ತದೆ.

**6 ಮತ್ತು 7 ಸೆಪ್ಟೆಂಬರ್ 2026 * ಭಾನುವಾರ ಮತ್ತು ಸೋಮವಾರ**

ದೇವಾಲಯದ ಮೂರ್ತಿಗಳ ಪ್ರತಿಷ್ಠಾಪನೆ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮಗಳು
6 ಸೆಪ್ಟೆಂಬರ್ 2026 ಬೆಳಗ್ಗೆ 6.00ಕ್ಕೆ ದೇವಾಲಯ ಪ್ರವೇಶ ನಂತರ ವಿಶೇಷ ಪೂಜೆಗಳು ಪ್ರಾರಂಭವಾಗುತ್ತವೆ

**7 ಸೆಪ್ಟೆಂಬರ್ 2026 * ಸೋಮವಾರ**

ಪ್ರಾತಃಕಾಲ 4.00 ಪ್ರತಿಷ್ಠಾಪನೆ * ಬೆಳಗ್ಗೆ 6.00 ಪ್ರಾಣಪ್ರತಿಷ್ಠಾಪನೆ * 7.00 ಕಲಶಾರೋಹಣ
* 9.30 ಕುಂಭಾಭಿಷೇಕ * 10.30 ಮಹಾಮಂಗಳಾರತಿ

## ದಿವ್ಯ ಸಾನ್ನಿಧ್ಯ

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಸುತ್ತೂರು ಶ್ರೀಕ್ಷೇತ್ರ

**ಜಗದ್ಗುರು ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳು**
ಶ್ರೀ ಅವಧೂತ ದತ್ತಪೀಠ
ಮೈಸೂರು

## ದಿವ್ಯ ಸಮ್ಮುಖ

**ಶ್ರೀ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್**
ಅಧ್ಯಕ್ಷರು, ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು

**ಡಾ. ಶ್ರೀ ಚನ್ನಬಸವ ಸ್ವಾಮಿಗಳು**
ಶ್ರೀ ದೇಗುಲ ಮಠ, ಕನಕಪುರ

## ಹಿರಿಯರ ಮನೆ ಉದ್ಘಾಟನೆ

**ಶ್ರೀ ಹೆಚ್.ಡಿ. ದೇವೇಗೌಡ**
ಮಾಜಿ ಪ್ರಧಾನಮಂತ್ರಿಗಳು

## ದೇವಾಲಯದ ಉದ್ಘಾಟನೆ

**ಶ್ರೀ ಬಿ.ಎಸ್. ಯಡಿಯೂರಪ್ಪ**
ಮಾಜಿ ಮುಖ್ಯಮಂತ್ರಿಗಳು

## ಅಧ್ಯಕ್ಷತೆ

**ಶ್ರೀ ಜಿ.ಟಿ. ದೇವೇಗೌಡ**
ಶಾಸಕರು ಹಾಗೂ ಮಾಜಿ ಸಚಿವರು

## ಕೊಡುಗೆ ನೀಡಿರುವವರ ಭಾವಚಿತ್ರಗಳ ಅನಾವರಣ

**ಶ್ರೀಮತಿ ರಾಣಿ ಸತೀಶ್**
ಮಾಜಿ ಸಚಿವರು













